ಆ) ಈ ಪೈಕಿ ಸ್ವಂತ ಕಟ್ಟಡಗಳನ್ನೊಂದಿರದ ಶಾಲೆಗಳ ಸಂಖ್ಯೆ ಎಷ್ಟು ಹಾಗೂ ಅಧ್ಯಾಪಕರಿಲ್ಲದ ಶಾಲೆಗಳ ಸಂಖ್ಯೆ ಎಷ್ಟು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

(ಅ) ಸರ್ಕಾರಿ ಶಾಲೆಗಳು

| | |
|---|---|
| ಪ್ರಾಥಮಿಕ ಶಾಲೆಗಳು— | ೨೯೦ |
| ಮಾಧ್ಯಮಿಕ ಶಾಲೆಗಳು— | ೧೦೪ |
| ಪ್ರೌಢ ಶಾಲೆಗಳು— | ೨೨ |

ಖಾಸಗಿ ಶಾಲೆಗಳು

| | |
|---|---|
| ಪ್ರಾಥಮಿಕ ಶಾಲೆಗಳು— | ಇಲ್ಲ |
| ಮಾಧ್ಯಮಿಕ ಶಾಲೆಗಳು— | ೮ |
| ಪ್ರೌಢ ಶಾಲೆಗಳು— | ೨೪ |

(ಆ) ಕಟ್ಟಡಗಳಿಲ್ಲದ ಶಾಲೆಗಳು

| | |
|---|---|
| ಸರ್ಕಾರಿ ಪ್ರಾಥಮಿಕ ಶಾಲೆಗಳು— | ೩೪ |
| ಸರ್ಕಾರಿ ಮಾಧ್ಯಮಿಕ ಶಾಲೆಗಳು— | ೧೦ |
| ಸರ್ಕಾರಿ ಪ್ರೌಢ ಶಾಲೆಗಳು— | ೧೪ |

ಖಾಸಗಿ ಶಾಲೆಗಳ ಮಾಹಿತಿ ಇಲ್ಲ—

ಅಧ್ಯಾಪಕರುಗಳಿಲ್ಲದ ಶಾಲೆಗಳು ಯಾವುವು ಇಲ್ಲ.

## ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದಿಡಲಾಗಿದೆ.

## ಬ್ಯಾಡಗಿ ತಾಲ್ಲೂಕಿನ ಶಾಲೆಗಳ ಬಗ್ಗೆ

೧೧೫(೧೭೯) ಶ್ರೀ ಕೆ. ಎಸ್. ಬೀಳಗಿ (ಬ್ಯಾಡಗಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಧಾರವಾಡ ಜಿಲ್ಲೆ ಬ್ಯಾಡಗಿ ತಾಲ್ಲೂಕಿನಲ್ಲಿರುವ ಸರ್ಕಾರಿ ಪ್ರಾಥಮಿಕ (ಹಿರಿಯ ಹಾಗೂ ಕಿರಿಯ) ಶಾಲೆಗಳ ಸಂಖ್ಯೆ ಎಷ್ಟು ?

ಆ) ಸರ್ಕಾರಿ ಕಟ್ಟಡಗಳಿರುವ ಶಾಲೆಗಳೆಷ್ಟು? (ಗ್ರಾಮದ ಹೆಸರುಗಳನ್ನು ಕೊಡುವುದು),

ಇ) ಮಂಜೂರಾದ ಶಿಕ್ಷಕರ ಸಂಖ್ಯೆಗಿಂತ ಕಡಿಮೆ ಶಿಕ್ಷಕರಿರುವ ಶಾಲೆಗಳೆಷ್ಟು. ಆ ಗ್ರಾಮದ ಹೆಸರುಗಳನ್ನು ಕೊಡುವುದು? ಹಾಗೆ ಕಡಿಮೆ ಇರುವ ಕಡೆ ಶಿಕ್ಷಕರನ್ನು ಕೂಡಲೇ ಒದಗಿಸಲಾಗುವುದೇ ?